ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಶುಕ್ರವಾರ, ದಿನಾಂಕ : 06 ನೇ ಮಾರ್ಚ್, 2020

ಮೈಸೂರಿನಿಂದ ಬೆಳಕವಾಡಿಗೆ ನೇರ ಬಸ್ ಸೌಕರ್ಯ

ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

280 (456) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಮೈಸೂರಿನಿಂದ ಮಳವಳ್ಳಿ ತಾಲ್ಲೂಕು ಬೆಳಕವಾಡಿಗೆ (ಟೀನರಸೀಪುರದ ಮೂಲಕ) ಮತ್ತು ನಂಜನಗೂಡಿನಿಂದ ಬೆಳಕವಾಡಿಗೆ ಬಸ್‌ಗಳನ್ನು ಓಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ;

(ಆ) ಬೆಳಕವಾಡಿಯಲ್ಲಿ 20,000 ಜನಸಂಖ್ಯೆ ಇದ್ದು ಮೈಸೂರಿನಿಂದ ಬೆಳಕವಾಡಿಗೆ ಹಾಗೂ ನಂಜನಗೂಡಿನಿಂದ ಬೆಳಕವಾಡಿಗೆ ಬೆಳಗ್ಗೆ ಮತ್ತು ಸಂಜೆ ಎರಡೆರಡು ಬಸ್ಸುಗಳನ್ನು ಓಡಿಸಲು (ಟೀನರಸೀಪುರದ ಮೂಲಕ) ಎಷ್ಟು ದಿವಸಗಳಲ್ಲಿ ಕ್ರಮ ಕೈಗೊಳ್ಳಲಾಗುವುದು ;

(ಇ) ಬೆಳಕವಾಡಿಯಿಂದ ಮೈಸೂರಿಗೆ ಅಥವಾ ನಂಜನಗೂಡಿಗೆ ಹೋಗಬೇಕಾದರೆ ಕೊಳ್ಳೇಗಾಲಕ್ಕೆ ಅಥವಾ ಮಳವಳ್ಳಿಗೆ ಹೋಗಿ ನಂತರ ಇನ್ನೊಂದು ಬಸ್ಸಿನಲ್ಲಿ ಜನ ಪ್ರಯಾಣ ಮಾಡಬೇಕಾಗಿರುವುದರಿಂದ ನೇರವಾಗಿ ಬಸ್ಸಿನಲ್ಲಿ ಪ್ರಯಾಣ ಮಾಡಲು ಶೀಘ್ರವಾಗಿ ಅನುಕೂಲ ಮಾಡಿಕೊಡಲಾಗುವುದೆ ?